**ಅರ್ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **07.08.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಪಿ.ಇ. ವಕೀಲರಿಂದ:**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಪ.ವ.ವರದಿ, ದೋಷರೋಪಣೆ ಪಟ್ಟಿಯನ್ನು ಪರಿಶೀಲನೆ ಮಾಡಿರುತ್ತೇನೆ. ನಮ್ಮ ಕಂಪನಿಯು ವೈಯಕ್ತಿಕವಾಗಿ ತನಿಖೆ ಮಾಡಿಸಿರುತ್ತದೆ ಎಂದರೆ ಸರಿ. ಆ ರೀತಿ ತನಿಖೆಗೆ ನೇಮಕವಾಗಿದ್ದ ಅಧಿಕಾರಿಯು ಯಾವಾಗ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ತನಿಖೆಗೆ ಸಂಬಂಧಿಸಿದಂತೆ ದಾಖಲೆಗಳು ಮೈಸೂರಿನ ಮುಖ್ಯ ಕಛೇರಿಯಲ್ಲಿ ಇದ್ದು, ಅದಿಕಾರಿಯು ಅನುಮತಿ ನೀಡಿದರೆ ಹಾಜರುಪಡಿಸುತ್ತೇನೆ. ಆ ರೀತಿಯ ತನಿಖೆಯ ದಾಖಲೆಗಳನ್ನು ಪಡೆದುಕೊಳ್ಳಲು ಮುಖ್ಯ ಕಛೇರಿಗೆ ಪತ್ರ ವ್ಯವಹಾರ ಮಾಡಿರುವುದಿಲ್ಲ. ಆ ರೀತಿ ಪತ್ರ ವ್ಯವಹಾರ ಮಾಡಲು ನನಗೆ ತೊಂದರೆ ಇರಲಿಲ್ಲ. ಅಪಘಾತದಲ್ಲಿ ಯಾವ ಸ್ವರೂಪದ ವಾಹನ ಮತ್ತು ಅದರ ನೊಂದಣಿ ಸಂಖ್ಯೆ ದೋಷರೋಪಣೆ ಪಟ್ಟಿಯಲ್ಲಿ ನಮೂದು ಮಾಡಲಾಗಿದೆ ಎಂದು ಸದರಿ ದಾಖಲೆಯನ್ನು ನೋಡದೆ ನಾನು ಹೇಳಲಾಗುವುದಿಲ್ಲ. ನಾನು ದೋಷರೋಪಣೆ ಪಟ್ಟಿಯನ್ನು ಪರಿಶೀಲನೆ ಮಾಡಲು ಪ್ರಯತ್ನಿಸಿರುವುದಿಲ್ಲ. ದೋಷರೋಪಣೆ ಪಟ್ಟಿಯಲ್ಲಿ ನಮೂದು ಮಾಡಿರುವ ವಾಹನದ ನೊಂದಣಿ ಸಂಖ್ಯೆ ಮತ್ತು ವಾಹನ ಸರಿಯಾಗಿದೆ ಎಂದರೆ ಸರಿಯಲ್ಲ.

ಯಾವುದೋ ಅಪರಿಚಿತ ವಾಹನ ಅಪಘಾತಪಡಿಸಿರುತ್ತದೆ. ನಮ್ಮ ಕಂಪನಿಯ ವೈಯಕ್ತಿಕ ತನಿಖೆಯಿಂದ ಸದರಿ ಸಂಗತಿಯು ತಿಳಿದುಬಂದಿರುತ್ತದೆ. ತನಿಖಾದಿಕಾರಿಯು ತನಿಖೆ ಪೂರೈಸಿ ದೋಷರೋಪಣೆ ಪಟ್ಟಿ ಸಲ್ಲಿಸಿರುವುದನ್ನು ನಮ್ಮ ವೈಯಕ್ತಿಕ ತನಿಖಾದಿಕಾರಿಯಿಂದ ನಾನು ಯಾವಾಗ ತಿಳಿದುಕೊಂಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಸದರಿ ದಿನಾಂಕವನ್ನು ಅಂದಾಜಾಗಿ ಸಹ ಹೇಳಲಾಗುವುದಿಲ್ಲ. ಪ್ರ.ವ. ವರದಿ ಮತ್ತು ಸ್ಥಳ ಪಂಚನಾಮೆಯ ಅದಾರದ ಮೇಲೆ ಅಪರಿಚಿತ ವಾಹನ ಅಪಘಾತಪಡಿಸಿದೆ ಎಂದು ಹೇಳುತ್ತಿದ್ದೇನೆ. ಸದರಿ ಎರಡು ದಾಖಲೆಗಳನ್ನು ಹೊರತುಪಡಿಸಿ ನಾನು ಇತರೆ ಪೋಲೀಸ್ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಎರಡು ದಾಖಲೆಗಳ ಜೊತೆಗೆ ನಾನು ದೋಷರೋಪಣೆ ಪಟ್ಟಿ , ಐ ಎಂ ವಿ ವರದಿ, ಪಾಲಿಸಿಯನ್ನು ಪರಿಶೀಲನೆ ಮಾಡಿರುತ್ತೇನೆ. ಪಾಲಿಸಿಯು

ಟ್ರಾಕ್ಟರ್ ಗೆ ಸಂಬಂಧಿಸಿದಾಗಿದ್ದು ಅದು 1ನೇ ಎದುರುದಾರರಿಗೆ ಸೇರಿರುತ್ತದೆ. ದೋಷರೋಪಣೆ ಪಟ್ಟಿಯಲ್ಲಿ ನಮೂದಾಗಿರುವ ವಾಹನಕ್ಕೆ ನಮ್ಮ ಕಂಪನಿಯಿಂದ ವಿಮೆಯನ್ನು ನೀಡಲಾಗಿದೆ ಎಂದರೆ ಸರಿ. ಅಪಘಾತದ ಕಾಲಕ್ಕೆ ಟ್ರಾಕ್ಟರಗೆ ಸಂಬಂಧಿಸಿದ ವಿಮೆಯು ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ದೋಷರೋಪಣೆ ಪಟ್ಟಿಯಲ್ಲಿ ನಮೂದು ಮಾಡಿರುವ ವಾಹನವನ್ನು ಅರ್ ಟಿ ಒ ರವರು ಪರಿಶೀಲನೆ ಮಾಡಿರುವ ಬಗ್ಗೆ ಐ ಎಂ ವಿ ವರದಿಯಲ್ಲಿ ಇರುತ್ತದೆ. ದೋಷರೋಪಣೆ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೀರಾ ಎಂದರೆ ಅದನ್ನು ನಮ್ಮ ಮೇಲಾಧಿಕಾರಿಗಳು ಮಾಡಬೇಕು. ನಮ್ಮ ಮೇಲಾಧಿಕಾರಿಯು ಆ ರೀತಿ ದೋಷರೋಪಣೆ ಪಟ್ಟಿ ಯನ್ನು ಪ್ರಶ್ನೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಸಂಗತಿಯ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಆ ರೀತಿ ಪತ್ರ ವ್ಯವಹಾರ ಮಾಡಿ ತಿಳಿದುಕೊಳ್ಳಲು ನನಗೆ ತೊಂದರೆ ಇರುವುದಿಲ್ಲ. ನಮ್ಮ ಮುಖ್ಯ ಕಛೇರಿ ಮತ್ತು ನಮ್ಮ ಕಛೇರಿಯಿಂದ ಇದೂವರೆವಿಗೆ ದೋಷರೋಪಣೆ ಪಟ್ಟಿಯನ್ನು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪೋಲೀಸರು ಟ್ರಾಕ್ಟರ್ ಮೇಲೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಪ್ರಶ್ನೆ ಮಾಡಲು ಮೇಲ್ಮನವಿಯನ್ನು ಸಲ್ಲಿಸಲು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಪತ್ರ ವ್ಯವಹಾರ ಮಾಡಿರುವುದಿಲ್ಲ. ಪರಿಹಾರ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನಾನು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ